ಆರೋಗ್ಯ

# ಹರ್ಲರ್ ಸಿಂಡ್ರೋಮ್

## ಅಸ್ಥಿಮಜ್ಜೆ ಕಸಿಯಿಂದ ಗುಣಮುಖ



ಅಸ್ಥಿಮಜ್ಜೆ ಕಸಿ ಮಾಡಿಸಿಕೊಂಡ ಅಮ್ಮೈರಾ ತನ್ನ ತಾಯಿಯೊಂದಿಗೆ.

ಪಾಕಿಸ್ತಾನದ ಕರಾಚಿ ಮೂಲದ ಎರಡು ವರ್ಷದ ಪುಟಾಣಿ ಅಮ್ಮೈರಾ ಸಿಖಂದರ್ ಖಾನ್‌ಗೆ ಹರ್ಲರ್ ಸಿಂಡ್ರೋಮ್ ಅಥವಾ ಮ್ಯೂಕೋ ಪೊಲಿಸ್ಯಾಕರಿಡೋಸಿಸ್ ಟೈಪ್ ಎಲ್‌ಎಂಪಿಎಸ್ 1 ಎಂಬ ಆನುವಂಶಿಕ ಕಾಯಿಲೆ. ಇದಕ್ಕೆ ಅಸ್ಥಿಮಜ್ಜೆ ಕಸಿ ಒಂದೇ ಚಿಕಿತ್ಸೆಯಾಗಿದ್ದು, ಅಮ್ಮೈರಾಗೆ ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ಐದು ತಿಂಗಳ ಹಿಂದೆ ಈ ಚಿಕಿತ್ಸೆ ನೀಡಲಾಗಿತ್ತು. ತಂದೆ ಪಾಕಿಸ್ತಾನ ಕ್ರಿಕೆಟ್ ವೀಕ್ಷಕ ವಿವರಣೆಗಾರ ಸಿಖಂದರ್ ಬಖ್ತ್ ಅವರ ಪುತ್ರಿಯಾಗಿದ್ದು, ತಂದೆಯ ಅಸ್ಥಿಮಜ್ಜೆಯನ್ನೇ ದಾನವಾಗಿ ಪಡೆದಿದ್ದಾಳೆ. ಇದರಿಂದ ಮರುಹುಟ್ಟು ಪಡೆದ ಮಗು ಈಗ ಸಂಪೂರ್ಣವಾಗಿ ಚೇತರಿಸಿಕೊಂಡಿದೆ.

ಇದು ಬಹಳ ಅಪರೂಪದ ರೋಗವಾಗಿದ್ದು, ಕಣ್ಣು, ಮೆದುಳು ಸೇರಿದಂತೆ ಇತರ ಅಂಗಾಂಗಗಳ ಕಾರ್ಯನಿರ್ವಹಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅಲ್ಲದೆ ಈ ಅಂಗಗಳ ಕ್ಷಮತೆಯನ್ನು ಕುಗ್ಗಿಸುವ ಕಾಯಿಲೆ.

ಹರ್ಲರ್ ಸಿಂಡ್ರೋಮ್ ಬಹಳ ಅಪರೂಪದ ಆನುವಂಶಿಕ ಕಾಯಿಲೆ. ತಲಸ್ಸೇಮಿಯಾ ಕೂಡ ರಕ್ತಸಂಬಂಧಿ ಆನುವಂಶಿಕ ಕಾಯಿಲೆ. ಮಕ್ಕಳನ್ನೇ ಬಾಧಿಸುವ ಈ ಕಾಯಿಲೆಗಳಿಗೆ ಅಸ್ಥಿಮಜ್ಜೆ ಕಸಿ ಒಂದೇ ದಾರಿ.

■ **ಉಮಾ ಅನಂತ್**

### ಅಸ್ಥಿಮಜ್ಜೆ ಕಸಿ ಪರಿಣಾಮಕಾರಿ

ಹರ್ಲರ್ ಸಿಂಡ್ರೋಮ್‌ಗೆ ಅಸ್ಥಿಮಜ್ಜೆ ಕಸಿ ಅತ್ಯಂತ ಪರಿಣಾಮಕಾರಿ. ಅಲ್ಲದೆ ಹಲವು ರೀತಿಯ ರಕ್ತದ ಕಾಯಿಲೆಗಳಿಗೆ, ಕ್ಯಾನ್ಸರ್‌ಗಳಿಗೆ ಅಸ್ಥಿಮಜ್ಜೆ ಕಸಿಯೇ ದಾರಿ. ತೀವ್ರವಾದ ಮತ್ತು ದೀರ್ಘಕಾಲದ ಮೈಲೋಯ್ಡ್ ಮತ್ತು ಲಿಂಫೋಬ್ಲಾಸ್ಟಿಕ್ ಲ್ಯುಕೇಮಿಯಾ, ಲಿಂಫೋಮಾ, ಮೈಲೋಪ್ರೊಲಿಫೆರೇಟಿವ್ ನಿಯೋಪ್ಲಾಮ್‌ಗಳು, ಪ್ರಾಥಮಿಕ ಮೈಲೋಫಿಬ್ರೋಸಿಸ್ ಮತ್ತು ಮಲ್ಟಿಪಲ್ ಮೈಲೋಮಾದಂತಹ ಕ್ಯಾನ್ಸರ್ ಕಾಯಿಲೆಗೆ ಅಸ್ಥಿಮಜ್ಜೆ ಕಸಿ (ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್) ಚಿಕಿತ್ಸೆ ಅತ್ಯಂತ ಪರಿಣಾಮಕಾರಿ. ರಕ್ತ ಸಂಬಂಧಿ ಅಸ್ವಸ್ಥತೆಗಳಾದ ಅಪ್ಲಾಸ್ಟಿಕ್ ಅನೀಮಿಯಾ, ಇಮ್ಯುನೊ ಡಿಫೀಷಿಯೆನ್ಸಿ ಮುಂತಾದ ಸಮಸ್ಯೆ, ತಲಸ್ಸೇಮಿಯಾ, ಸಿಕಲ್ ಸೆಲ್ ಅನೀಮಿಯಾಗಳಿಗೂ ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್ ಸೂಕ್ತವಾದ ಚಿಕಿತ್ಸಾ ವಿಧಾನ' ಎನ್ನುತ್ತಾರೆ ನಾರಾಯಣ ಹೆಲ್ತ್ ಸಿಟಿಯ ವಯಸ್ಕರ ಹೆಮಟಾಲಜಿ ಮತ್ತು ಮೂಳೆ ಮಜ್ಜೆಯ ಕಸಿ ಘಟಕದ ಮುಖ್ಯಸ್ಥ ಡಾ. ಶರತ್ ದಾಮೋದರ್.

'ಅಸ್ಥಿಮಜ್ಜೆ ಕಸಿಯಿಂದ 20ಕ್ಕೂ ಹೆಚ್ಚು ರೀತಿಯ ಕಾಯಿಲೆಗಳನ್ನು ಗುಣಪಡಿಸಬಹುದು. ಇದರಿಂದ ಶೇ.70– 80ರಷ್ಟು ಯಶಸ್ಸನ್ನು ನಿರೀಕ್ಷಿಸಬಹುದು. ಆದರೆ ಈ ಚಿಕಿತ್ಸಾ ವಿಧಾನದ ಬಗ್ಗೆ ರೋಗಿಗಳಲ್ಲಿ ಅರಿವಿನ ಕೊರತೆ ಇದೆ. ಇವರಿಗೆ ಅಸ್ಥಿಮಜ್ಜೆ ಕಸಿ ಬಗ್ಗೆ ಮಾಹಿತಿ ನೀಡಬೇಕಾಗಿದೆ' ಎನ್ನುತ್ತಾರೆ ಅವರು.

### ಆನುವಂಶಿಕ ಕಾಯಿಲೆ

ಹರ್ಲರ್ ಸಿಂಡ್ರೋಮ್ (ಮ್ಯೂಕೋ ಪೊಲಿಸ್ಯಾಕರಿಡೋಸಿಸ್ ಟೈಪ್ ಎಲ್‌ಎಂಪಿಎಸ್ I) ಎನ್ನುವುದು ಆನುವಂಶಿಕ ಕಾಯಿಲೆ. ಇದು ಚಯಾಪಚಯ ಕ್ರಿಯೆಯಲ್ಲಿನ ದೋಷವನ್ನು ಒಳಗೊಂಡಿರುವ ಕಾಯಿಲೆಯೂ ಆಗಿದೆ.

'ಸಾಮಾನ್ಯವಾಗಿ ಈ ಕಾಯಿಲೆಗೆ ಒಳಗಾದ ಮಗು ತೀವ್ರವಾದ ಬುದ್ಧಿಮಾಂದ್ಯತೆ, ದೃಷ್ಟಿ ಸಮಸ್ಯೆ, ಕಿವುಡುತನ, ಯಕೃತ್ ತೊಂದರೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತದೆ, ಬಾಗಿದ ಬೆನ್ನು, ಚಿಕ್ಕ ಕೈಕಾಲುಗಳು, ದೊಡ್ಡ ತಲೆ, ಭಾರವಾದ ಹುಬ್ಬುಗಳು, ವಕ್ರ ಹಲ್ಲುಗಳನ್ನು ಹೊಂದಿರುತ್ತದೆ. ಹುಟ್ಟಿದ ಎರಡೇ ವರ್ಷಗಳಲ್ಲಿ ಈ ಎಲ್ಲ ಚಿಹ್ನೆಗಳನ್ನು ರೋಗಿಯಲ್ಲಿ ಕಾಣಬಹುದು' ಎಂದು ಹೇಳುತ್ತಾರೆ ನಾರಾಯಣ ಹೆಲ್ತ್‌ಸಿಟಿಯಲ್ಲಿ ಪೀಡಿಯಾಟ್ರಿಕ್

